Sri K. H. Ranganath (Minister for Forests).—

) 192 workers.

b) All the daily wage workers working from the date prior to 1-11-1984 and who continue to be working are paid wages as per Supreme Court orders reiterated in G. O. No. DPAR 10 SLC 89 dated 29-4-1989.

c) As in (b)

ಶ್ರೀ ನಾರಾಯಣರಾವ್ ಮನಹಳ್ಳಿ.—ಸನ್ಮಾನ್ಯ ಅಧ್ಯಕ್ಷರೆ. ಬೀದರ್ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರಿಗೆ ಸುಪ್ರೀಂ ಕೋರ್ಟಿನ ಆದೇಶದ ಪ್ರಕಾರ ಪಗಾರ ಕೊಡುತ್ತಿದ್ದೇವೆಂದು ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಇಡೀ ಕರ್ನಾಟಕದಲ್ಲಿ ದಿನಗೂಲಿ ನೌಕರರು ಇದ್ದಾರೆ. ಬೀದರ್‌ನಲ್ಲಿ ಬಹುಶಃ ೫-೧೦ ವರ್ಷಗಳಿಂದ ಸಂಬಂಧಪಟ್ಟ ಇಲಾಖೆಯಲ್ಲಿ ದಿನಗೂಲಿ ನೌಕರರು ಕೆಲಸ ಮಾಡುತ್ತಿದ್ದಾರೆ. ಅವರಿಗೆ ಪಗಾರ ಅಂತೂ ಕೊಡುತ್ತಾರೆ. ಆದರೆ ದಿನಂಪ್ರತಿ ೧೨ ರೂಪಾಯಿ ಪ್ರಕಾರ ಪಗಾರ ಕೊಡುತ್ತಿದ್ದಾರೆ. ಸುಪ್ರೀಂ ಕೋರ್ಟ್ ಆರ್ಡರ್ ಪ್ರಕಾರ ಮಿನಿಮಂ ವೇಜಸ್ ಏನು ಸಿಗಬೇಕು ಆ ಪ್ರಕಾರ ಸಿಗುತ್ತಿಲ್ಲ. ಅದರ ಸಲುವಾಗಿ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.— ಮಾನ್ಯ ಅಧ್ಯಕ್ಷರೆ, ಈಗ ದಿನಗೂಲಿ ನೌಕರರಿಗೆ ಕೊಡತಕ್ಕ ಕೂಲಿ ಏನಿದೆ ಅದು ಮಿನಿಮಮ್ ವೇಜಸ್‌ನಷ್ಟೇ ಇದೆ, ಅದಕ್ಕಿಂತ ಕಡಿಮೆ ಏನೂ ಇಲ್ಲ.

ಶ್ರೀ ನಾರಾಯಣರಾವ್ ಮನಹಳ್ಳಿ.—ಬರೀ ೧೨ ರೂಪಾಯಿ ಪ್ರಕಾರ ಕೊಡುತ್ತಿದ್ದಾರೆ. ಮಿನಿಮಮ್ ವೇಜಸ್ ಪ್ರಕಾರ ಕನಿಷ್ಟ ತಿಂಗಳಿಗೆ ೫೦೦ ರೂಪಾಯಿ ಕೊಡಬೇಕು.

ಶ್ರೀ ಕೆ. ಎಚ್. ರಂಗನಾಥ್.—ಸ್ವಲ್ಪ ಹೆಚ್ಚು ಕಡಿಮೆ ಆಲ್ಲಿಗೆ ಬರುತ್ತದೆ. ೧೨ × ೩೦—೪೦೦ ಆಗುತ್ತದೆ. ಐದು ನೂರು ರೂಪಾಯಿಗಳಿಗೆ ಬರುತ್ತದೆ. ಇನ್ನೊಂದು ೨೦ ರೂಪಾಯಿ ಮಾತ್ರ ಕಡಿಮೆಯಾಗುತ್ತದೆ.

ಶ್ರೀ ನಾರಾಯಣರಾವ್ ಮನಹಳ್ಳಿ.—೧೨ × ೩೦—೩೬೦ ಆಯಿತು, ೪೦೦ ಅಷ್ಟೆ.

ಶ್ರೀ ಕೆ. ಎಚ್. ರಂಗನಾಥ್.—ನಾನು ಮಗ್ಗಿ ತಪ್ಪು ಹೇಳಿದೆ.

ಶ್ರೀ ನಾರಾಯಣರಾವ್ ಮನಹಳ್ಳಿ.—ಆದರೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಈ ತರಹ ಕೊಡುತ್ತಿಲ್ಲ. ಬೀದರ್‌ನಲ್ಲಿ ದಿನಗೂಲಿ ನೌಕರರು ಸ್ಟೈಕ್ ಮಾಡಬೇಕೆಂದು ತೀರ್ಮಾನ ಮಾಡಿದ್ದರು. ಅದಕ್ಕೆ ನಾನು ಮಧ್ಯಸ್ಥಿಕೆ ವಹಿಸಿ, ಸರ್ಕಾರವನ್ನು ಕೇಳಿ ಬೇರೆ ವಿಚಾರ ಮಾಡಿರಿ ಎಂದು ಹೇಳಿದಾಗ ಅವರು ಸುಮ್ಮನೆ ಇದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ಇದು ವ್ಯಾಪಕವಾಗಿರತಕ್ಕಂಥ ಪ್ರಶ್ನೆ. ತಾವು ಮೊನ್ನೆ ಪತ್ರಿಕೆಯಲ್ಲಿ ಓದಿರಬಹುದು. ಸುಪ್ರೀಂ ಕೋರ್ಟ್‌ನವರು ಮೊನ್ನೆ ತಾನೆ ೧೮ ಸಾವಿರ ಜನರಿಗೆ ದುಡ್ಡು ಕೊಟ್ಟು ಬಿಡಿ ಎಂದು ಹೇಳಿದ್ದಾರೆ. ಹೀಗಾಗಿ ಸಮಸ್ಯೆ ದೊಡ್ಡದಾಗಿದೆ, ಕೂಲಂಕಷವಾಗಿ ವಿಚಾರ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರು ಆವರ ಮೆನಸ್ಸಿನಲ್ಲಿರುವ ಆತಂಕವನ್ನು ನನ್ನ ಜೊತೆಗೆ ಪ್ರಸ್ತಾಪ ಮಾಡಲಿ, ಆಲ್ಲಿರತಕ್ಕಂಥ ನೌಕರರಿಗೆ ಅನುಕೂಲವಾಗುವ ರೀತಿಯಲ್ಲಿ ವಿಚಾರ ಮಾಡುತ್ತೇನೆ.

(ಪ್ರಶ್ನೆ ೧೭೪ (೪೫೩) ಮಾನ್ಯ ಸದಸ್ಯರಾದ ಶ್ರೀ ಕೆ. ಸೋಮಪ್ಪ ಸುವರ್ಣ ಆವರು ಗೈರು ಹಾಜರಿದ್ದರು)

## ಬೆಳಗಾವಿಯಲ್ಲಿ ಶಿಕ್ಷಕರುಗಳ ಕೊರತೆ

೪೫೫ ಶ್ರೀ ಶಿವಾನಂದ ಎಚ್ ಕೌಜಲಗಿ (ಬೈಲಹೊಂಗಲ).—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯಲ್ಲಿ ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)

ಅ) ಜಿಲ್ಲೆಯಲ್ಲಿ ಕೊರತೆ ಇರುವ ಶಿಕ್ಷಕರ ಸಂಖ್ಯೆ ಎಷ್ಟು ? ಹಾಗೂ ಎಂದಿನಿಂದ ಈ ಶಿಕ್ಷಕರ ಕೊರತೆ ಇದೆ ?

ಶ್ರೀ ಕೆ. ಎಚ್. ರಂಗನಾಥ್. (ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು).—

ಅ) ೫.೨೯.೩೭೫

| | | |
|---|---|---|
| ೧) | ಅಥಣಿ | ೫೨೩೯ |
| ೨) | ಬೆಳಗಾಂ ನಗರ | ೫೬೬೦೭ |
| ೩) | ಬೆಳಗಾಂ ತಾ. | ೪೮೯೬೫ |
| ೪) | ಬೈಲಹೊಂಗಲ | ೫೫೩೨೧ |
| ೫) | ಚಿಕ್ಕೋಡಿ | ೩೮೩೬೮ |
| ೬) | ಗೋಕಾಕ್ | ೫೮೭೦೨ |
| ೭) | ಹುಕ್ಕೇರಿ | ೪೭೬೫೯ |
| ೮) | ಖಾನಾಪುರ | ೩೨೨೪೩ |
| ೯) | ನಿಪ್ಪಾಣಿ | ೩೯೪೫೮ |
| ೧೦) | ರಾಮದುರ್ಗ | ೨೫೮೨೫ |
| ೧೧) | ರಾಯಬಾಗ್ | ೩೬೧೯೮ |
| ೧೨) | ಸವದತ್ತಿ | ೩೭೩೦೨ |

ಆ) ೧೩೨೯ ದಿನಾಂಕ ೧-೬-೧೯೮೮ ರಿಂದ

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಬೆಳಗಾವಿ ಜಿಲ್ಲೆಯಲ್ಲಿ ೧೩೨೯ ಶಿಕ್ಷಕರ ಜಾಗಗಳು ಖಾಲಿ ಇರುತ್ತವೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಮತ್ತು ಆ ಶಾಲೆಗಳಲ್ಲಿ ಇವತ್ತು ೫.೨೯.೩೭೫ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಇವತ್ತಿನ ದಿವಸ ೧೨೦ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರು ಬೆಳಗಾವಿ ಜಿಲ್ಲೆಯಲ್ಲಿ ಇದ್ದಾರೆ. ಇದು ತಾವು ಕೊಟ್ಟಂಥ ಅಂಕಿ ಸಂಖ್ಯೆಗಳ ಪ್ರಕಾರ ಇದೆ. ನಾನು ಕೇಳುವುದೇನೆಂದರೆ, ಇನ್ನು ಎಷ್ಟು ದಿವಸಗಳಲ್ಲಿ ಶಿಕ್ಷಕರ ಹುದ್ದೆಗಳನ್ನು ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಿ ? ನಿರ್ದಿಷ್ಟವಾದ ತಾರೀಖಿನ್ನು ಹೇಳಿ. ಇವತ್ತಿನ ದಿವಸ ಜಿಲ್ಲಾ ಪರಿಷತ್ತಿನವರು ನಾವು ನಮ್ಮ ಹಣದಿಂದ ನೇಮಕ ಮಾಡುತ್ತೇವೆ ಎಂದರೆ ಶ್ರೀ ಬಸವಲಿಂಗಪ್ಪನವರು ಬಿಡಲಾರರು. ಸರ್ಕಾರದವರು ನೇಮಕ ಮಾಡುವುದಕ್ಕೆ ತಯಾರಿಲ್ಲ. ಹೀಗಾಗಿ ಇಲ್ಲಿ ಶಿಕ್ಷಣ ವ್ಯವಸ್ಥೆ ಸಂಪೂರ್ಣವಾಗಿ ಹಾಳಾಗಿದೆ. ಮಂತ್ರಿಗಳು ತಮ್ಮ ಮಕ್ಕಳನ್ನು ಕಾನ್ವೆಂಟ್‌ಗಳಿಗೆ ಕಳಿಸುತ್ತಾರೆ ಮತ್ತು ಅವರ ಮಕ್ಕಳ ವಿದ್ಯಾಭ್ಯಾಸ ಚೆನ್ನಾಗಿ ಆಗುತ್ತಿದೆ. ಆದರೆ ಬಡಬಗ್ಗರನ್ನು ಕೇಳುವವರು ಯಾರು ? ಆದ್ದರಿಂದ ಎಷ್ಟು ದಿವಸಗಳಲ್ಲಿ ಈ ಶಿಕ್ಷಕರ ಹುದ್ದೆಗಳನ್ನು ತುಂಬುತ್ತೀರಿ ? ನಿರ್ದಿಷ್ಟವಾಗಿ ಹೇಳಬೇಕೆಂದು ಕೋರುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್. – ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರು ಏನು ಹೇಳಿದರು ೧೨೦ ಹುಡುಗರಿಗೆ ಒಬ್ಬ ಉಪಾಧ್ಯಾಯರು ಬೆಳಗಾವಿ ಜಿಲ್ಲೆಯಲ್ಲಿ ಇದ್ದಾರೆ ಎಂದು ಇದು ಸತ್ಯಕ್ಕೆ ದೂರವಾದ ಮಾತು. ಇವತ್ತು ಒಬ್ಬ ಉಪಾಧ್ಯಾಯರಿಗೆ ೫೦ ಹುಡುಗರ ಪ್ರಮಾಣದ ಪ್ರಕಾರ ಬೆಳಗಾವಿ ಜಿಲ್ಲೆಗೆ ೧೦,೫೮೮ ಉಪಾಧ್ಯಾಯರು ಬೇಕಾಗುತ್ತಾರೆ. ಈಗ ೯,೪೫೭ ಉಪಾಧ್ಯಾಯರು ಇದ್ದಾರೆ, ಹೀಗಾಗಿ ೧೩೨೯ ಉಪಾಧ್ಯಾಯರು ಕಡಿಮೆ ಬೀಳತಕ್ಕದ್ದು. ಈಗ ಕಪ್ಪು ಹಲಗೆ ಯೋಜನೆಯಲ್ಲಿ ೨ ತಾಲ್ಲೂಕುಗಳಲ್ಲಿ ಸುಮಾರು ೧೨೦-೧೪೦ ರಷ್ಟು ಉಪಾಧ್ಯಾಯರನ್ನು ನೇಮಕ ಮಾತ ಆಗಿದೆ. ಈಗ ಸರ್ಕಾರ ೧೨ ಸಾವಿರ ಉಪಾಧ್ಯಾಯರನ್ನು ನೇಮಕ ಮಾಡಬೇಕೆಂದು ನಾವು ವಿಚಾರ ಮಾಡುತ್ತಿದ್ದೇವೆ. ಅದಕ್ಕಾಗಿ ಕಾನೂನುಗಳನ್ನು ಅಂದರೆ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಬೇಕೆಂದ ವಿಚಾರ ಮಾಡುತ್ತಿದ್ದೇವೆ. ಅದನ್ನು ಮಾಡುವಾಗ ಇದನ್ನು ಭರ್ತಿ ಮಾಡತಕ್ಕಂಥ ಕೆಲಸ ಆಗುತ್ತದೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ,—ಇವತ್ತಿನ ದಿವಸ ನನ್ನ ಮತದಾರ ಕ್ಷೇತ್ರದಲ್ಲಿ ಅನಗೋಳದಲ್ಲಿ ೫೧೪ ವಿದ್ಯಾರ್ಥಿಗಳು ಇದ್ದಾರೆ ಮತ್ತು ಬರೇ ಮೂರು ಜನ ಟೀಚರ್ಸ್ ಇದ್ದಾರೆ. ಸಂಗೊಳ್ಳಿಯಲ್ಲಿ ೬೧೨ ವಿದ್ಯಾರ್ಥಿಗಳು ಇದ್ದಾರೆ, ಟೀಚರ್ಸ್ ಇರುವುದು ೫ ಜನ ಮಾತ್ರ. ಎರಡು ವರ್ಷದಿಂದ ಈ ಪ್ರಕಾರ ಇದ್ದಾರೆ ಒಂದನೇ ತರಗತಿಯಿಂದ ೭ ನೇ ತರಗತಿವರೆಗೆ ಅದೇ ಉಪಾಧ್ಯಾಯರುಗಳು ಕಲಿಸಬೇಕು. ಇನ್ನು ಎಷ್ಟು ಸಮಯದಲ್ಲಿ ಈ ಹುದ್ದೆಗಳನ್ನು ತುಂಬುತ್ತೀರಿ ಎಂದು ನಿರ್ದಿಷ್ಟವಾಗಿ ಹೇಳಬೇಕು. ೫ ತಿಂಗಳು, ೬ ತಿಂಗಳು, ಒಂದು ವರ್ಷ, ಎರಡು ವರ್ಷ ಅಂತ ಹೇಳಲಿ. ನಮ್ಮ ತಕರಾರು ಇಲ್ಲ ಆದರೆ ನಿರ್ದಿಷ್ಟವಾದ ಒಂದು ವೇಳೆ, ದಿವಸ ಹೇಳಿದರೆ ನಮಗೆ ಸಂತೋಷವಾಗುತ್ತದೆ

ಅದಕಾರಣ ಮಾನ್ಯ ಮುಖ್ಯ ಮಂತ್ರಿಗಳು ಹಿಂದಿನ ಅಧಿವೇಶನದಲ್ಲಿ ಏನೆಂದರೆ, ನಾನು ಗುಲ್ಬರ್ಗಾ ಜಿಲ್ಲೆಗೆ ಹೋದಾಗ ಇಂತಹ ಶಿಕ್ಷಣ ವ್ಯವಸ್ಥೆ ನೋಡಿ ಬಹಳ ಕೆಡುಕು ಅನಿಸಿತು ಎಂದು ಹೇಳಿದ್ದರು. ಆದರೆ ಮೂರು ತಿಂಗಳಾದರೂ ಶಿಕ್ಷಕರನ್ನು ನೇಮಿಸಲಿಕ್ಕೆ ಯಾವುದೇ ಕ್ರಮವನ್ನೂ ಕೈಗೊಂಡಿಲ್ಲ. ಇನ್ನು ಎಷ್ಟು ದಿವಸಗಳಲ್ಲಿ ಶಿಕ್ಷಕರನ್ನು ನೇಮಿಸುತ್ತೀರಿ ಎನ್ನುವುದನ್ನು ಹೇಳಬೇಕೆಂದು ನಾನು ಕೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—೭ ವರ್ಷಗಳಲ್ಲಿ ಆಗದೇ ಇರತಕ್ಕ ಕೆಲಸವನ್ನು, ಮೂರೇ ತಿಂಗಳಲ್ಲಿ ಮಾಡಬೇಕೆಂದು ಮಾನ್ಯ ಸದಸ್ಯರು ಬಯಸಿದರೆ ಕಷ್ಟದ ಕೆಲಸ. ನಾನು ಈಗಾಗಲೇ ಹೇಳಿದ್ದೇನೆ. ಹೆಚ್ಚು ಕಡಿಮೆ ಮುಂದೆ ಶಾಲೆಗಳು ಪ್ರಾರಂಭವಾಗುವ ಸಮಯಕ್ಕೆ ಈ ಒಂದು ಅನುಕೂಲವಾಗತಕ್ಕ ಕಾರ್ಯಕ್ರಮ ಆಗುತ್ತದೆ. ಹೆಚ್ಚು ಎಂದರೆ, ಜುಲೈ, ಆಗಸ್ಟ್‌ನೊಳಗೆ ಈ ಕೆಲಸ ಮುಗಿಯುತ್ತದೆ. ಆದ್ದರಿಂದ ತಾವು ಈ ವಿಚಾರದಲ್ಲಿ ಹೆಚ್ಚು ದಿವಸ ಕಾಯಬೇಕಾದ್ದು ಅನಾವಶ್ಯಕ. ಇದು ತಮ್ಮ ಸರ್ಕಾರ ನಮಗೆ ಕೊಟ್ಟ ತೊಂದರೆ. ತಮ್ಮ ಸರ್ಕಾರದಲ್ಲಿ ಮಾಡಿ ಬಿಟ್ಟಿದ್ದರೆ, ನಮಗೆ ತೊಂದರೆ ಇರುತ್ತಾ ಇರಲಿಲ್ಲ. ನಮ್ಮ ಅಜ್ಜಿ ಒಂದು ಗಾದೆ'' ಹೇಳುತ್ತಿದ್ದರು, ''ಕಾರುಡೀನ ಕಾರುಡಿ ಎಂದು ಹೇಳಬೇಡ, ಕಾರುಡೀನ ಚೆನ್ನಿ ಎಂದು ಹೇಳಿ ಎಂದು. ತಮಗೆ ಕೋಪ ಬರದೇ ಇರಲಿ ಎಂದು ಹೇಳುತ್ತಿದ್ದೇನೆ ತಾವು ೭ ವರ್ಷಗಳಲ್ಲಿ ಇದನ್ನು ಮಾಡಿದ್ದರೆ, ಈ ಸಮಸ್ಯೆಯೇ ಇರುತ್ತಿರಲಿಲ್ಲ. ಈ ಕಣ್ಣ ಸಮಸ್ಯೆಯನ್ನು ದೊಡ್ಡದು ಮಾಡಿ, ಮೂರು ತಿಂಗಳಲ್ಲಿ ಸಂಧಾರಣೆ ಮಾಡಬೇಕೆಂದು ಹೇಳಿದರೆ ಕಷ್ಟವಾಗುತ್ತದೆ. ನಾವು ವೇಕೆನ್ಸಿಗಳನ್ನು ಐಡೆಂಟಿಫೈ ಮಾಡಬೇಕು, ಹಣ ಒದಗಿಸಬೇಕು, ರೆಕ್ರೂಟ್‌ಮೆಂಟ್ ರೂಲ್ಸ್ ಮಾಡಬೇಕು ಇವೆಲ್ಲಾ ಕೆಲಸಗಳಿವೆ. ಮತ್ತೆ ಇವತ್ತು ಜಿಲ್ಲಾಪರಿಷತ್ತಿನವರು ಅಡ್ಡಿ ಬರುತ್ತಿದ್ದಾರೆಂದು ತಾವು ಹೇಳಿದಿರಿ. ಸ್ವಾಮಿ, ಮುನ್ನೂರು ರೂಪಾಯಿಗೆ ಒಬ್ಬ ಶಿಕ್ಷಕ ಕೆಲಸ ಮಾಡಬೇಕೇ, ಆರು ನೂರು ರೂಪಾಯಿಗೆ ಒಬ್ಬ ಲೆಕ್ಚರರ್ ಬಂದು ಫರ್ಸ್ಟ್ ಗ್ರೇಡ್ ಕಾಲೇಜಿನಲ್ಲಿ ಪಾಠ ಹೇಳಬೇಕೇ, ಹೇಳುತ್ತಾರೆಯೇ ? ಎಂದಾದರೂ ಹೇಳಿದ್ದರೆ ? ಇದನ್ನು ವಿಚಾರ ಮಾಡೋಣ ಯಾವುದೋ ಊರಿನಲ್ಲಿ ಇಪ್ಪು ಹುಡುಗರು ಇದ್ದಾರೆ, ಆದರೆ ಮೂರು ಜನ ಮಾತ್ರ ಶಿಕ್ಷಕರು ಇದ್ದಾರೆ ಎಂದು ತಾವು ಹೇಳಿದಿರಿ. ಕೆಲವು ಕಡೆ ೩೦–೪೦ ಹುಡುಗರು ಇರತಕ್ಕ ಹಾಗೂ ೪–೫ ತರಗತಿಗಳು ಇದ್ದರೂ ಕೂಡ ೫–೬ ಜನ ಉಪಾಧ್ಯಾಯರನ್ನು ಹಾಕಲೇ ಬೇಕಾಗುತ್ತದೆ, ಹಾಕಿದ್ದೇವೆ. ಈ ತರಹ ಒಂದು ವ್ಯವಸ್ಥಿತವಾದ ರೀತಿಯಲ್ಲಿ ಈ ವಿದ್ಯಾ ಇಲಾಖೆ ಇಲ್ಲ. ಇದನ್ನೆಲ್ಲಾ ಸಮಗ್ರವಾಗಿ ವಿಚಾರ ಮಾಡಿ ಮಾಡಬೇಕೆಂದರೆ ಸ್ವಲ್ಪ ಸಮಯ ಆಗುತ್ತದೆ. ದಯಮಾಡಿ ತಾವು ಕೋಪ ಮಾಡಿಕೊಳ್ಳಬೇಡಿ. ಮೂರು ತಿಂಗಳಲ್ಲಿ ಆಗಲಿಲ್ಲವೆಂದರೆ ಮೂರು ತಿಂಗಳಲ್ಲಿ ತಪ್ಪಿಗೆ ಮಾಡಲಿಕ್ಕೆ ಆಗುತ್ತದೆಯೇ ಎಂದು ನಾನು ಕೇಳುತ್ತೇನೆ,

ಶ್ರೀ ಎಸ್. ಹೆಚ್. ಕೌಜಲಗಿ.—ಅದನ್ನು ಒಪ್ಪುತ್ತೇನೆ. ನಮ್ಮ ಸರ್ಕಾರದಲ್ಲಿ ಎಷ್ಟು ನೇಮಿಸ ಬೇಕೋ ಅಷ್ಟನ್ನು ನೇಮಿಸಿದ್ದಾರೆ, ಒಂದು ವರ್ಷ ಗವರ್ನರ್ ಆಡಳಿತ ಇದ್ದು, ಅಲ್ಲಿಂದಲೂ ಶಿಕ್ಷಕರ ನೇಮಕ ಆಗಿರುವುದಿಲ್ಲ.

ಶ್ರೀ ಕೆ. ಹೆಚ್. ರಂಗನಾಥ್,—ಸಮಸ್ಯೆ ಇದೆ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಅಧ್ಯಕ್ಷರೆ, ೧೦೦-೧೫೦ ವಿದ್ಯಾರ್ಥಿಗಳು ಇರುವ ಕಡೆ ಒಬ್ಬ ಶಿಕ್ಷಕರು ಹಾಗೂ ೩೦–೪೦ ವಿದ್ಯಾರ್ಥಿಗಳು ಇರುವ ಕಡೆ ೩–೪ ಜನ ಶಿಕ್ಷಕರು ಇರುವಂತಹ ವ್ಯವಸ್ಥೆ ೫–೬ ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಇದೆ. ಆದರಲ್ಲೂ ನಮ್ಮ ಜಿಲ್ಲೆಯಲ್ಲಿ ಬಹಳ ಜಾಸ್ತಿ ಇದೆ. ೪೫ ವಿದ್ಯಾರ್ಥಿಗಳು ಇರುವ ಕಡೆ ಒಬ್ಬ ಶಿಕ್ಷಕರನ್ನು ಹಾಕುವಂತಹ ವ್ಯವಸ್ಥೆ ಇದೆ. ಇವತ್ತು ವರ್ಗಾವರ್ಗಿ ಮಾಡುವ ಅಧಿಕಾರ ಜಿಲ್ಲಾಪರಿಷತ್ತಿಗೆ ಕೊಟ್ಟಿದ್ದಾಗ ಈ ನ್ಯೂನತೆಗಳನ್ನು ಆ ಜಿಲ್ಲಾಪರಿಷತ್ ಸರಿ ಮಾಡದೇ ಇದ್ದರೆ, ಅಂತಹ ಜಿಲ್ಲಾ ಪರಿಷತ್ತಿನ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ? ಮಂತ್ರಿ ವಿರೋಧಿ ಪಕ್ಷದವರು ಅದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಾರೊ ಹೇಗೆ ಎನ್ನುವುದನ್ನು ಹೇಳಬೇಕು.

ಶ್ರೀ ಕೆ. ಹೆಚ್. ರಂಗನಾಥ್.—ಅಧ್ಯಕ್ಷರೇ, ತಾವು ಅಪ್ಪಣೆ ಕೊಡಿಸಿದರೆ, ಹೇಳುತ್ತೇನೆ. ಈ ಪ್ರಶ್ನೆಗೆ ಇದು ರಿಲವೆಂಟ್ ಆಗುವುದಿಲ್ಲ.

ಶ್ರೀ ಬಿ. ಹಂಪನನಗೌಡ.—ಪೋಸ್ಟ್ ಸ್ಯಾಂಕ್ಷನ್ ಮಾಡುವ ಅಧಿಕಾರ ಜಿಲ್ಲಾಪರಿಷತ್ತಿಗೆ ಇದೆಯೇ ಅಥವಾ ಸರ್ಕಾರಕ್ಕೆ ಇದೆಯೇ ಎಂಬುದಕ್ಕೆ ಉತ್ತರ ಹೇಳಬೇಕು.

(ಉತ್ತರ ಇಲ್ಲ)